ನಿಯಮಾವಳಿಗಳನ್ನು ಪಾಲಿಸಬೇಕೆಂದು ಕೋರುತ್ತೇನೆ. ಮೊಟ್ಟಮೊದಲಿಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಮಾಣವಚನ ಸ್ವೀಕಾರ ಮಾಡಬೇಕು ನಂತರ ಮಂತ್ರಿಮಂಡಲದ ಮಾನ್ಯ ಸದಸ್ಯರುಗಳು, ಮಾನ್ಯ ವಿಧಾನಸಭಾಧ್ಯಕ್ಷರ ಸ್ಥಾನಕ್ಕೆ ನಿಯೋಜಿತರಾದ ಹಿರಿಯ ಸದಸ್ಯರಾದಂಥ ಸನ್ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ವೇಳೆ ಗೈರುಹಾಜರಾಗಿದ್ದರೆ ನಮ್ಮ ಸಂಪ್ರದಾಯದ ಹಿನ್ನೆಲೆಯಲ್ಲಿ ತಮ್ಮ ಹೆಸರುಗಳು Alphabetic ರೀತಿಯಲ್ಲಿದೆ. ಶಾಸಕರುಗಳ ಹೆಸರುಗಳನ್ನು ಸೂಚಿಸುತ್ತಾರೆ ಆ ಪ್ರಕಾರ ಪ್ರಮಾಣವಚನ ಸ್ವೀಕಾರ ಮಾಡಬೇಕು. ತಮಗೆ ನಿಯಮಗಳು ಗೊತ್ತಿದೆ. ಹೊಸದಾಗಿ ಬಂದಿರುವ ಶಾಸಕರ ಗಮನಕ್ಕೆ ತರಬೇಕಾದರೆ, ಮಾನ್ಯ ಸದಸ್ಯರುಗಳ ಹೆಸರುಗಳನ್ನು ಕಾರ್ಯದರ್ಶಿಯವರು ಕರೆದಾಗ ಅವರು ತಮ್ಮ ಸ್ಥಾನವನ್ನು ಬಿಟ್ಟು ಕಾರ್ಯದರ್ಶಿಯವರ ಮೇಜಿನ ಬಲಭಾಗಕ್ಕೆ ಬಂದು ಸದಸ್ಯರು ಚುನಾಯಿತರಾದ ಬಗ್ಗೆ ನೀಡಿರತಕ್ಕಂಥ ಘೋಷಣಾ ಪತ್ರವನ್ನು ಕಾರ್ಯದರ್ಶಿ-- ಯವರಿಗೆ ತೋರಿಸತಕ್ಕದ್ದು. ಪ್ರಮಾಣವಚನ ಅಥವಾ ಪ್ರತಿಜ್ಞಾ ವಚನ ಪ್ರತಿಯನ್ನು ಮಾನ್ಯ ಸದಸ್ಯರಿಗೆ ನೀಡಲಾಗುವುದು. ಮಾನ್ಯ ಸದಸ್ಯರು ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನವನ್ನು ಸ್ವೀಕರಿಸುವ ಸಮಯದಲ್ಲಿ ಅಧ್ಯಕ್ಷರ ಪೀಠಕ್ಕೆ ಅಭಿಮುಖವಾಗಿರುವುದು ಮತ್ತು ಸಂವಿಧಾನಬದ್ಧವಾಗಿ ಸಿದ್ಧಪಡಿಸಿದ ನಿರ್ದಿಷ್ಟ ನಮೂನೆಯಂತೆ ಪ್ರಮಾಣವಚನ ಸ್ವೀಕರಿಸುವುದು. ಅದಾದ ನಂತರ ಅಧ್ಯಕ್ಷ ಸ್ಥಾನದಲ್ಲಿರುವ ಮಾನ್ಯ ಸಭಾಧ್ಯಕ್ಷರ ಬಳಿಗೆ ಹೋಗಿ ಅವರಿಗೆ ಹಸ್ತಲಾಘನವನ್ನು ಕೊಟ್ಟು ಮಾನ್ಯ ಸದಸ್ಯರು ಅಧ್ಯಕ್ಷ ಪೀಠದ ಹಿಂಭಾಗದ ಮೇಲಿನ ಮತ್ತೊಂದು ಭಾಗದಿಂದ ಬಂದು ಅಲ್ಲಿರುವ ಸದಸ್ಯರ ನಾಮಾವಳಿ ಪುಸ್ತಕದಲ್ಲಿ ಸಹಿ ಮಾಡುವುದು. ನಾಮಾವಳಿಯ ಪುಸ್ತಕದಲ್ಲಿ ಸಹಿ ಮಾಡಿದ ನಂತರ ಮಾನ್ಯ ಸದಸ್ಯರು ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳುವುದು. ಈಗ ಒಂದು ಪ್ರಕಟಣೆಯನ್ನು ಮಾಡುತ್ತಿದ್ದೇನೆ.

2. ಪ್ರಕಟಣೆ

ವಿಷಯ : ಅಧ್ಯಕ್ಷರ ನಾಮನಿರ್ದೇಶನ

ಹಂಗಾಮಿ ಅಧ್ಯಕ್ಷರು : ನನ್ನ ಈ ಒಂದು ಹಂಗಾಮಿ ಅಧ್ಯಕ್ಷತೆಯಲ್ಲಿ 14ನೇ ವಿಧಾನಸಭೆಯ ಮೊದಲನೇ ಅಧಿವೇಶನದ ಸಭಾಧ್ಯಕ್ಷರ ಗೈರು-- ಹಾಜರಿಯಲ್ಲಿ ವಿಧಾನಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲು ಕರ್ನಾಟಕ

ವಿಧಾನಸಭೆಯ ಕಾರ್ಯವಿಧಾನ ಹಾಗು ನಡೆವಳಿಕೆಗಳ ನಿಯಮಗಳ ನಿಯಮ 9 ರ ಮೇರೆಗೆ ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲಾಗಿದೆ;

1. ಡಾ: ಎ.ಬಿ.ಮಾಲಕರೆಡ್ಡಿ
2. ಶ್ರೀಬಿ.ಆರ್. ಯಾವಗಲ್
3. ಶ್ರೀ ಮನೋಹರ್ ಹೆಚ್.ತಹಶೀಲ್ದಾರ್
4. ಶ್ರೀ ಡಿ.ನಾಗರಾಜಯ್ಯ
5. ಶ್ರೀ ವಿಶ್ವೇಶ್ವರ ಹೆಗೆಡೆ ಕಾಗೇರಿ

3. ಸದಸ್ಯರಿಂದ ಪ್ರಮಾಣ ವಚನ ಅಥವಾ ಪ್ರತಿಜ್ಞಾವಚನ ಸ್ವೀಕಾರ

ಹಂಗಾಮಿ ಅಧ್ಯಕ್ಷರು : ಪ್ರಮಾಣ ವಚನ ಕಾರ್ಯಕ್ರಮ ನಡೆಸಲು ಕಾರ್ಯದರ್ಶಿಯವರು ಮಾನ್ಯ ಸದಸ್ಯರುಗಳ ಹೆಸರುಗಳನ್ನು ಕರೆಯುವ ಮೂಲಕ ಪ್ರಾರಂಭಿಸಬೇಕೆಂದು ಹೇಳುತ್ತೇನೆ.

ಕಾರ್ಯದರ್ಶಿ, ವಿಧಾನಸಭೆ :– ಸನ್ಮಾನ್ಯ ಸಭಾಧ್ಯಕ್ಷರೆ, ಈಗ ತಮ್ಮ ಅಪ್ಪಣೆ ಮೇರೆಗೆ ಪ್ರಮಾಣ ವಚನ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದು. ಮೊದಲಿಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರು ಪ್ರಮಾಣ ವಚನ ಸ್ವೀಕರಿಸಬೇಕೆಂದು ಆಹ್ವಾನಿಸುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸಭಾಧ್ಯಕ್ಷರೆ, ಅತ್ಯಂತ ಸಂತೋಷಕರ ಸಂಗತಿ ಏನೆಂದರೆ ಈ ಮನೆಯ ಹಿರಿಯ ಸದಸ್ಯರಾಗಿ ಆರು ಬಾರಿ ವಿಧಾನಸಭೆಯನ್ನು ಪ್ರವೇಶ ಮಾಡಿದಂಥ ತಾವು ಈ ಕಡೆ ಮತ್ತು ಆ ಕಡೆ ಎರಡೂ ಕಡೆಗಳಲ್ಲಿಯೂ ಕುಳಿತು ಅನುಭವವನ್ನು ಪಡೆದಿರುವಂಥ ತಾವು ಈಗ protem Speaker ಆಗಿ ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದೀರಿ. ತಮಗೆ ಅಭಿನಂದನೆಗಳ. ತಾವು ಸದನಕ್ಕೆ ಸಂದೇಶವನ್ನು ಕೊಡುವಂಥ ಸಂದರ್ಭದಲ್ಲಿ ನೂತನವಾಗಿ ಬಂದಿರತಕ್ಕಂಥ ಅನೇಕ ಸದಸ್ಯರುಗಳು ಸದಸ್ಯರುಗಳ ಪ್ರಮಾಣವಚನ..

ಶ್ರೀ ಕೆ.ಜೆ.ಜೋಪಯ್ಯ : ನೀವು ಈಗ ಮಾತನಾಡಲಿಕ್ಕೆ ಬರುವುದಿಲ್ಲ. ಪ್ರಮಾಣವಚನ ಆದ ನಂತರ ಮಾತನಾಡಿ. ಮೊದಲ ದಿವಸವೇ ನೀವು ನಿಯಮಾವಳಿ ಮುರಿಯುತ್ತಿದ್ದೀರಿ. ನಾನು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದಕ್ಕೆ ನಾನು ನಿಯಮಾವಳಿ ಬಗ್ಗೆ ಹೇಳುತ್ತಿದ್ದೇನೆ.